*Available online at www.elixirpublishers.com (Elixir International Journal)*

**Literature**

*Elixir Literature 123 (2018) 51996-51998*

ISSN: 2229-712X

# Importance of Women in open Drama
# ಬಯಲಾಟದಲ್ಲಿ ಮಹಿಳೆಯ ಮಹತ್ವ

Bullannavar Basusab ಬುಳ್ಳಣ್ಣವರ ಬಾಸೂಸಾಬ

ಸರಕಾರಿ ಪ್ರಥಮ ದರ್ಜೆ ಕಾಲೇಜು ಗದಗ, ಕರ್ನಾಟಕ Govt First Grade College Gadag, Karnataka

**ARTICLE INFO**

**Article history:**
Received:15 August 2018;
Received in revised form:
22 September 2018;
Accepted: 10 October 2018;

**Keywords**
Sri Ramachandra – ಶ್ರೀ ರಾಮಚಂದ್ರ
Fire – ಅಗ್ನಿ
War – ಯುದ್ಧ
Site – ಸೀತೆ
Women – ಮಹಿಳೆ

**ABSTRACT**

Most of our revelations, such as the basic plot of the epics, have emphasized the importance of women. Especially in the plains, the importance of women as a culture of this land has been depicted. Whether they are mythological or created in epic storylines, women are given importance in everything. "Durula Dusyas, who was engaged in drawing Draupadi's clothes, had the holy mantle of Bharatangane, the young Drupadaje's husband, always ready to protect her dignity. There is no time to be humiliated by a dog like you. In this case, the woman feels helpless and speaks with self-confidence, but the words of believing in God in such a dire hour are appropriate according to the portrayal of the character.

**© 2018 Elixir All rights reserved.**

**1. ಪೀಠಿಕೆ:**

ಪುರಾಣೇತಿಹಾಸ ಮಹಾಕಾವ್ಯಗಳ ಮೂಲ ಕಥಾವಸ್ತುವಾಗಿಸಿಕೊಂಡಂತಹ ಬಹುತೇಕ ನಮ್ಮ ಬಯಲಾಟಗಳು ಕಾಲಕಾಲಕ್ಕೂ ಮಹಿಳೆಯ ಮಹತ್ವವನ್ನು ಸಾರಿವೆ. ಹೀಗಾಗಿ ಯಾವುದೇ ಘಟನೆಗೆ ಅದು ಒಳಿತಿರಲಿ ಒಳಿತಾಗದಿರಲಿ ಅದರ ಹಿಂದೆ ಘಟನೆಗಳಿಗೆ ಕಾರಕಗಳಾಗಿ, ಪೂರಕಗಳಾಗಿ ಕೊನೆಗೆ ಮಾರಕಳಾಗಿಯೂ ತನ್ನತನವನ್ನು ಮೆರೆದಿದ್ದಾಳೆ. ರಾಮಾಯಣದ ಭಾಗವಾದ ಇಂದ್ರಜಿತು ಕಾಳಗ ಬಯಲಾಟದಲ್ಲಿ ದುಷ್ಟರಾವಣನನ್ನು ಸಂಹರಿಸಿ ಸೀತೆಯನ್ನು ಕರೆ ತಂದ ಶ್ರೀರಾಮಚಂದ್ರ ದ್ವಂದ್ವ ಮನಸ್ಕನಾಗಿ ಒದ್ದಾಡುತ್ತಾ, ಜನನಿಂದೆಗೆದರಿ ಕೈ ಹಿಡಿದ ಪತ್ನಿಯನ್ನು, ಪಂಚಪತಿವ್ರತೆಯರಲ್ಲೊಬ್ಬಳಾದ ಅಂಥಾ ಸೀತಾ ಮಾತೆಯನ್ನು ಸಂದೇಹಿಸುತ್ತಾನೆ.

**2. ವಿಷಯ:**

ಶ್ರೀರಾಮಚಂದ್ರನು ಮರ್ಯಾದಾ ಪುರುಷೋತ್ತಮನೆಂದು ಬಿರುದು ಗಳಿಸಿದ್ದರೂ ಪುರುಷ ಜಾತಿಗನುಗುಣವಾಗಿ ವರ್ತಿಸಿ ರಾಮ "ಸೀತೆ ನಿನಗೆ ಶುಭವಾಗಲಿ, ಪ್ರಾಣೇಶ್ವರಿ ಪರಹಸ್ತಗತಳಾದ ನಿನ್ನನ್ನು ಸ್ವೀಕರಿಸಿದಲ್ಲಿ ನಾನು ಲೋಕಾಪವಾದವನ್ನು ಹೊರಬೇಕಾಗುತ್ತದೆ" ಎಂದಾಗ ಸೀತೆಯ ಮನಸ್ಥಿತಿ ಹೇಗಾಗಬೇಡ. ನಿರಂತರ ಪತಿಯನ್ನು ಸ್ಮರಿಸುತ್ತಾ ಆತನ ಬರುವಿಕೆಯನ್ನೇ ಕಣ್ಣಿವೆಯಿಕ್ಕದೆ ನೋಡುತ್ತ ಕುಳಿತ ಆ ತಾಯಿ ಅನಿವಾರ್ಯವಾಗಿ ಅಗ್ನಿ ದೇವನಿಗೆ ಮೊರೆ ಹೋಗಬೇಕಾಗುತ್ತದೆ.

"ಹೇ ಅಗ್ನಿ ದೇವ ನನ್ನಲ್ಲಿ ಪಾವಿತ್ರ್ಯವಿದ್ದರೆ ನನ್ನನ್ನು ಕಾಪಾಡು. ನಾರಾಯಣ" ಎಂದು ಅಗ್ನಿಕುಂಡದಲ್ಲಿ ಹಾರಲಾಗಿ ಅಗ್ನಿ ಶಾಂತವಾಗುತ್ತದೆ. ಅದನ್ನು ಕಂಡ ಶ್ರೀರಾಮಚಂದ್ರ "ಸೀತೆ ನೀನು ಪವಿತ್ರಳು, ಪರಿಶುದ್ಧಳು ನಿನ್ನನ್ನು ಪಡೆದ ನಾನೆ ಧನ್ಯ"–1

ಎಂದು ಸಂತಸಗೊಂಡು ಸ್ವೀಕರಿಸುತ್ತಾನೆ. ಆದರೆ ಯಾವ ತಪ್ಪು' ಮಾಡದ, ಯಾವುದಕ್ಕೂ ಕಾರಣಳಲ್ಲದ ಆ ತಾಯಿಯ ಮೇಲಿನ ಅಪವಾದ ನೂರು ಮರಣ ದಂಡನೆಗಿಂತಲೂ ಅಧಿಕವಲ್ಲವೆ. ಆದಾಗ್ಯೂ ಶಾಂತಿ, ಸಹನೆ, ತಾಳ್ಮೆಗೆ ಮತ್ತೊಂದು ಹೆಸರೇ ಮಹಿಳೆಯಲ್ಲವೆ, ಎಂಬುದು ಇಲ್ಲಿ ದೃಢಪಡುತ್ತದೆ.

**1. Introduction**

Most of our revelations, such as the basic plot of mythological epics, have from time to time mentioned the importance of women. Thus, for any event whether it is good or not, she has shown herself as a catalyst, a complement to the events behind it, and finally as a fatality. Sri Ramachandra, who killed the wicked Ravana and summoned Sita in the Battle of Indrajitu, a part of the Ramayana, is double-minded and doubts his wife, Sita Mata, who is one of the Panchapativratas, who held hands against people.

**2. Content**

Although Sri Ramachandra earned the title of a noble man, he behaved according to the male caste and when Rama said, "Good luck to you Sita, if Praneswari accepts you, I will have to bear secularism." The mother, who is constantly remembering her husband and watching his coming, inevitably has to turn to the fire god.

"O Agni Deva, if I have purity in me, save me. Narayana" is thrown into the fire pit and the fire calms down. Sri Ramachandra saw it and said, "Sita, you are holy, I am blessed to have you pure" -1

A happily accepts. But the exception of that mother who has done no wrong and is not responsible for anything is not more than a hundred death sentences. However, it is confirmed here that women are not just another name for peace, tolerance and patience.

**Tele: 8861814506**
**E-mail addresses: bullannavarbasusab@gmail.com**

**© 2018 Elixir All rights reserved.**

ಇನ್ನೂ ಪೌರಾಣಿಕ ಮೂಲದ ಭಕ್ತಿಯ ಕಥೆ ಭಕ್ತ ಮಾರ್ಕಂಡೇಯ ದಲ್ಲಿ ಅಲ್ಪಾಯುಷಿಯಾದ ಮಾರ್ಕಂಡೇಯನನ್ನು ಪಡೆದು ಬಂಜೆತನದಿಂದ ಮುಕ್ತಳಾದ ತಾಯಿ ಮುರದ್ವತಿ ಮೃಕಂಡು ಮಹಾಮುನಿಯ ಪತ್ನಿ ಮುಗ್ಧಹಸುಳೆ ಮಾರ್ಕಂಡೇಯನಲ್ಲಿ ಅಚಲವಾದ ನಂಬಿಕೆಯನ್ನು ತುಂಬುವಲ್ಲಿ ದೈವದ ಬಗ್ಗೆ ವಿಶ್ವಾಸವನ್ನು ಗಟ್ಟಿಗೊಳಿಸುವಲ್ಲಿ ಸಫಲಳಾಗುತ್ತಾಳೆ. ಹೀಗಾಗಿ ಆ ಮಗು ಮೃತ್ಯುಂಜಯನನ್ನು ಒಳಿಸಿಕೊಳ್ಳುವಲ್ಲಿ ಮೃತ್ಯುವನ್ನು ಗೆಲ್ಲುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾಳೆ.

ಮುರದ್ವತಿ "ಮಗನೆ ಶಿವಾನುಗ್ರಹದಿಂದ ನನ್ನ ಗರ್ಭದಲ್ಲಿ ಜನಿಸಿದೆ. ನಿನಗೆ ಶಿವ ಕೊಟ್ಟ ಜ್ಞಾನವಿದೆ. ನಾವು ನಿನಗೆ ನಿಮಿತ್ಯ ಮಾತ್ರರಾದ ತಂದೆ–ತಾಯಿಗಳು ನನ್ನ ಬಂಜೆತನ ಹೋಗಲಾಡಿಸುವದಕ್ಕಾಗಿ ನೀನು ಮಗನಾದೆ. ನಮ್ಮನ್ನು ಸದ್ಗತಿಗೆ ಮುಟ್ಟಿಸುವ ಮಗನಾದೆ. ಅಭ್ಯಾಸ ಮಾಡಿ ಬೇಕಾದಷ್ಟು ವಿದ್ಯೆ ಸಂಪಾದಿಸಬಹುದು. ಆದರೆ ಬುದ್ಧಿ ಬರುವುದು ಕರ್ಮಾನುಸಾರ ನೀನು ಬುದ್ಧಿವಂತನಾಗಬೇಕು".2

ಹೀಗೆ ಹೇಳುತ್ತಾ ಎಳೆಯ ಮನಸ್ಸಿಗೆ ಶಿವನೊಲುಮೆಯ ಬಗ್ಗೆ ಅಷ್ಟೊತ್ತಿ ಬಿಡುತ್ತಾಳೆ. ಮಗ ಅಲ್ಪಾಯುಷಿಯೆಂಬ ಅಂತರ್ಗತವಾದ ಸಂಕಟವನ್ನು ನುಂಗಿಕೊಂಡು ಯಾರ ಆಣತಿಯಂತೆ ಸೃಷ್ಟಿ ಕ್ರಿಯೆ ನಡೆಯುವುದೋ ಆತನನ್ನು ಒಲಿಸಿಕೊಂಡು ಮಗ ದೀರ್ಘಾಯುಷಿಯಾಗುವಲ್ಲಿ ಮುರದ್ದತಿಯ ಮಹತ್ವ ಮನದಟ್ಟಾಗುತ್ತದೆ.

ದೌಪದಿ ವಸ್ತ್ರ ಸೆಳೆಯುವಲ್ಲಿ ನಿರತನಾದ ದುರುಳ ದುಸ್ಯಾಸನಿಗೆ ತರುಣಿ ದ್ರುಪದಜೆ ಪತಿವ್ರತೆಯಾದ ಭಾರತಾಂಗನೆಯ ಪಾವಿತ್ರ್ಯ ಕವಚವು ಅವಳ ಮಾನ ರಕ್ಷಣೆಗಾಗಿ ಸದಾ ಸಿದ್ಧವಾಗಿರುವುದು. ನಿನ್ನಂಥಾ ಶ್ವಾನನಿಂದನ್ನ ಅವಮಾನಲಾಗುವುದು ಯಾವ ಕಾಲಕ್ಕೂ ಶಕ್ಯವಿಲ್ಲ.3

ಎನ್ನುವಲ್ಲಿ ಹೆಣ್ಣು ಅಬಲೆಯೆನಿಸಿದರೂ ಆತ್ಮ ವಿಶ್ವಾಸದಿಂದ ಸಬಲೆಯ ನುಡಿಯನ್ನಾಡಿ ಅಂತಹ ವಿಷಮ ಘಳಿಗೆಯಲ್ಲಿ ವಿಶ್ವಾಸ ಹೊಂದಿ ದೈವವನ್ನು ನಂಬುವ ನುಡಿಗಳು ಪಾತ್ರ ಚಿತ್ರಣಕ್ಕನುಗುಣವಾಗಿ ಔಚಿತ್ಯವನ್ನು ಮೆರೆಯುತ್ತವೆ.

ಇನ್ನು ವೀರತ್ವಕ್ಕೆ ಹೆಸರಾದ ವೀರ ಅಭಿಮನ್ಯುವು ಯುದ್ಧಕ್ಕೆ ಯುದ್ಧಕ್ಕೆ ತೆರಳಲೇಬೇಕಾದ ಸನ್ನಿವೇಶ ಪ್ರಾಪ್ತವಾದಾಗ ಅತ್ತ ಸಮಸಪ್ತಕರೊಡನೆ ಕಾದಾಡಲು ಅರ್ಜುನ ತೆರಳುತ್ತಾನೆ. ಇತ್ತ ಕೌರವರು ಚಕ್ರವ್ಯೂಹ ರಚಿಸಿ ಅಟ್ಟಹಾಸದಲ್ಲಿ ಕುಣಿಯುವಾಗ ಅಭಿಮನ್ಯು ಯುದ್ಧಕ್ಕೆ ತೆರಳುವುದಾಗಿ ದೊಡ್ಡಪ್ಪಂದಿರಾದ ಧರ್ಮಜ, ಭೀಮರಲ್ಲಿ ಪ್ರಸ್ತಾಪಿಸುತ್ತಾನೆ. ಆಗ ಅವರೀರ್ವರೂ ಅಭಿಮನ್ಯುವನ್ನು ಯುದ್ಧಕ್ಕೆ ತೆರಳುವಲ್ಲಿ ಬೇಡವೆಂದು ತಡೆಯುವಲ್ಲಿ ವಿಫಲರಾಗುತ್ತಾರೆ. ಯಾರ ಮಾತೂ ಕೇಳದೆ ಕ್ಷಾತ್ರ ಧರ್ಮಕ್ಕನುಗುಣವಾಗಿ ನುಡಿದು ನಿಂತಾಗ ವಿಧಿಯಿಲ್ಲದೆ ಒಪ್ಪಿ ಕಳಿಸುವ ತಾಯಿ ಸುಭದ್ರೆ "ಮಗುವೇ ನಿನ್ನ ವೀರವಾಣಿಗೆ ನಾನು ಎಚ್ಚರವಾದೆ ನನ್ನ ಹೃದಯದಲ್ಲಿ ಧೈರ್ಯ ಸಂಚಾರವಾಯಿತು. ಹೋಗು ಮಗು ಯುದ್ಧಕ್ಕೆ ಹೊರಡು ನಿನಗೆ ನಾನು ಅಡ್ಡಾಗುವದಿಲ್ಲ. ಇದೋ ನಿನ್ನ ಕೊರಳಿಗೆ ವಿಜಯ ಮಾಲೆ ಹಾಕುತ್ತೇನೆ"–4

ಎಂದು ಹೃದಯದಲ್ಲಿ ಇದ್ದೊಬ್ಬ ಮಗ ಯುದ್ಧಕ್ಕೆ ಬಲಿಯಾಗುತ್ತಾನೆಂಬ ದಾವಾಗ್ನಿ ದಹಿಸುತ್ತಿದ್ದರೂ ಅದನ್ನು ತೋರಗೊಡದೆ ವೀರೋಚಿತ ನುಡಿಗಳನ್ನಾಡಿ ವೀರಮಾತೆಯಾಗಿ ಹರಸುವಲ್ಲಿ ತಾಯಿ ಸುಭದ್ರೆಯ ಪಾತ್ರ ತನ್ನ ಘನತೆಯನ್ನು ಮೆರೆದಿದೆ. ತಾಯಿಯಾಗಿ (ಮಹಿಳೆ) ಆಕೆ ಸಂದರ್ಭೋಚಿತ ನುಡಿಗಳನ್ನಾಡುತ್ತಾಳೆ. ಹೆತ್ತ ತಾಯಿ ಅನುಮತಿ ನೀಡಿದಾಗಲೂ ಇಡೀ ಜೀವನದ ಸರ್ವಸ್ವವೇ ಆದ ಪತಿರಾಯ ಮತ್ತೇ ಬರುವನೋ ಇಲ್ಲವೋ ಎಂಬ ದುಗುಡದಲ್ಲಿ ಒದ್ದಾಡುತ್ತಿದ್ದರೂ ಅನಿವಾರ್ಯತೆಗೆ ತಲೆಬಾಗಿ ತನ್ನ ನಲ್ಲನನ್ನು ಒಲ್ಲದ ಮನಸ್ಸಿನಿಂದ ಕಳಿಸುವ ಅಭಿಮನ್ಯುವಿನ ಸತಿ. ಉತ್ತರೆ "ಹೋಗು ಎಂದು ನಾಲಿಗೆ ಹೇಳದಾಗಿದೆ. ಛೇ ಇನು ಮೇಲೆ ನನ್ನ ಸೌಭಾಗ್ಯದಾತನಿಗೆ ಹೋಗಬೇಡವಂದೂ ನುಡಿಯದಾದೆ...... ನಾಥಾ ನಿಮಗೆ ಜಯವಾಗಲಿ ಹೋಗಿ ಬನ್ನಿರಿ.5

ಎಂಬ ಶುಭ ನುಡಿ ತುಟಿಯ ಮೇಲೆ ನಾಟ್ಯವಾಡಿದರೂ ಕುಂಕುಮ ಅಳಿಸಿತೆಂಬ ಅಂಜಿಕೆಯ ನುಡಿ ಒಳಗೊಳಗೆ ಆಕೆಯನ್ನು ಸುಡುತ್ತ ಮನೋನಿಗ್ರಹದಿಂದ ಪತಿಯನ್ನು ಬೀಳ್ಕೊಡುವಲ್ಲಿ ಉತ್ತರೆಯ ಪಾತ್ರ ಅತ್ಯಂತ ಮಹತ್ವತೆಯನ್ನು ಪಡೆಯುತ್ತದೆ.ಈ ರೀತಿಯಾಗಿ ಬಯಲಾಟಗಳು ಈ ನೆಲದ ಸಂಸ್ಕೃತಿಯಾಗಿ ಮಹಿಳೆಯ ಮಹತ್ವವನ್ನು ಬಿಂಬಿಸಿವೆ. ಅವು ಪೌರಾಣಿಕವೇ ಆಗಿರಲಿ, ಮಹಾಕಾವ್ಯಗಳ ಕಥಾಹಂದರಿನಲ್ಲಿ ರಚಿತಗೊಂಡಿರಲಿ' ಎಲ್ಲದರಲ್ಲೂ ಮಹಿಳೆಗೆ ಮಹತ್ವ ಕಲ್ಪಿಸಿವೆ. ಸಾಮಾಜಿಕ ಸಣ್ಣಾಟವಾದ "ಸಂಗ್ಯಾ ಬಾಳ್ಯಾ" ದಂಥ ಕಥೆಯಲ್ಲಿ ರೂಪವತಿಯಾದ ಗಂಗೆ ತಾನೇನು ಪಾಪ ಮಾಡದಿದ್ದರೂ ಪರಮ್ಮನ ಕುಟಿಲತನಕ್ಕೆ ಹೇಗೆ ಬಲಿಯಾಗುತ್ತಾಳೆನ್ನುವಲ್ಲಿ ಮಹಿಳೆಯ ಪಾತ್ರ ಚಿತ್ರಣಗೊಂಡು ಕುಂಟಲಗಿತ್ತಿ ಪರಮ್ಮಳಂತವಳಿಂದ ಗರತಿಯರು ದೂರವಿರಬೇಕೆಂಬ ಸಂದೇಶವನ್ನು ಈ ಕಥೆ ಸಾರುತ್ತದೆ.ಅರ್ಜುನನಿಗೆ ಯುದ್ಧದ

In the yet more mythological devotional story Bhakta Markandeya, Mugdhahasule, the wife of Mrikandu Mahamuni, the wife of the barren mother Muradvati, succeeds in instilling unshakable faith in Markandeya and strengthening her faith in God. Thus the child plays an important role in conquering death by subduing Mrityunjaya.

Muradvati "Son was born in my womb by Lord Shiva. You have knowledge given by Shiva. You became a son to remove my barrenness as parents who are just for you. He is the son who makes us ready. You can acquire as much knowledge as you need by practicing. But wisdom comes according to karma, you have to become wise". 2

Saying this, she lets the young mind know about Shivanolume. The importance of muraddhati is felt when the son becomes long-lived by invoking the one whose wish of creation is to swallow the inherent suffering of short-lived son.

Durula Dusyas, who was engaged in drawing Daupadi's dress, had the holy mantle of Bharatangane, the young Drupadaje's husband, always ready to protect her dignity. It is impossible to be humiliated by a dog like you. 3

In this case, the woman feels helpless and speaks with self-confidence, but the words of believing in God in such a dire hour are appropriate according to the portrayal of the character.

When the situation arises where the hero Abhimanyu, who is known for his bravery, has to go to war, Arjuna goes to fight with Atta Samasaptak. While the Kauravas are dancing in Attahasa by creating a labyrinth, Abhimanyu proposes to his elder brother Dharmaja and Bhima that he will go to war. Then all of them fail to prevent Abhimanyu from going to war. When he stood singing according to the Kshatra Dharma without listening to anyone, mother Subhadre, who gave consent without fate, said, "My son, I woke up to your heroic voice, and courage flowed in my heart. Go baby, go to war, I won't stand in your way. Here I will put a garland of victory on your neck"-4

The character of Subhadre's mother has shown her dignity in speaking heroic words without showing it, even though her son is burning in her heart that her son will become a victim of the war. As a mother (woman) she speaks on occasion. Abhimanyu's Sati who bows to the inevitable and reluctantly sends her Nalla away even when her mother gives her permission, she hesitates whether her husband, who is everything in her life, will come again or not. The answer is, "The tongue does not say go. I told my benefactor not to go there...5

Uttreya's role becomes very important when she bids farewell to her husband with self-control and burns her inside with the words of ``Kumkuma Odirithem" even though she dances on her lips. Whether they are mythological or created in the storyline of epics, women have been given importance in everything. In the social play "Sangya Balya", the role of a woman is portrayed as a victim of Paramma's cunning even though she did not commit any sin, and this story conveys the message that the Garathis of Kuntalagitti Parammalantavali should stay away. Arjuna's wife Chitrangadha begged him to be her son in the heat of battle, ignoring Babruvaha Chitrangade for me Hey Guna Maniye Another stage is excused, that is, Karna was killed by excessive sacrifice, Dasakantha was killed by excessive lust, and Kaurava was corrupted by excessive greed.

ಅಬ್ಬರದಲ್ಲಿ ಕುದುರೆ ಕಟ್ಟಿದವನು ತನ್ನ ಮಗನೆಂದು ಪರಿಪರಿಯಿಂದ ಪತ್ನಿ ಚಿತ್ರಾಂಗಧಾ ಬೇಡಿಕೊಂಡರೂ ಬಬ್ರುವಾಹನನ್ನು ಕಡೆಗಣಿಸಿ ನೀತಿ ವಾಕ್ಯಗಳನ್ನು ಧಿಕ್ಕರಿಸಿದ ಅರ್ಜುನನಿಗೆ ಚಿತ್ರಾಂಗದೆ ಹೇ ಗುಣ ಮಣಿಯೇ ಇನ್ನೊಂದು ಪೇಳ್ವೆನು ಮನ್ನಿಸು, ಅದೇನೆಂದರೆ ಅತಿತ್ಯಾಗದಿಂದ ಕರ್ಣನು ಹತನಾದನು, ಅತಿ ಕಾಮದಿಂದ ದಶಕಂಠನು ಹತನಾದನು, ಅತಿ ಲೋಭದಿಂದ ಕೌರವನು ಕೆಟ್ಟು ಹೋದನು ಇದರಂತೆ ದಾವುದಾದರೂ ಲೋಕದಲ್ಲಿ ಅತಿಯಾಗಬಾರದು.

ಹೇ ಕಾಂತಾ ರಾಗ್ರಾಮ ನಿಲಯನಾದ ಸಿದ್ಧಲಿಂಗೇಶ್ವರನ ಮನಸ್ಸಿಗೆ ಸರಿಯಾದ ಕಾರ್ಯ ಮಾಡಬೇಕು ಅಂಥಾದ್ದನ್ನು ಬಿಟ್ಟು ಪಂಥವನ್ನು ತೊಟ್ಟು ಮೂರ್ಖತನದಿಂದ ತರುಳನೋಳ್ ಧುರವನ್ನೆಸಗಿದರೆ ನಿನ್ನ ಶಿರವು ಉಳಿಯದು ಇದನ್ನರಿಕಾಂತಾ ನಡೆಯದು ನಿನ್ನ ಪಂಥ.

ಈ ರೀತಿಯಾಗಿ ಅರ್ಜುನನಿಗೆ ತಿಳಿ ಹೇಳುವ ಚಿತ್ರಾಂಗದೆ ಧೀರಳೂ, ಸಮಯಪ್ರಜ್ಞೆಯುಳ್ಳವಳೂ, ಚತುರಮತೀಯಳೂ ಆಗಿ ಸಮತೋಲನದಿಂದ ನುಡಿವ ಮಾತುಗಾರಳಾಗಿ ರೂಪಗೊಳ್ಳುತ್ತಾಳೆ. ಹೀಗಾಗಿ ಪುರುಷ ಪ್ರಧಾನವಾದ ಸಮಾಜದಲ್ಲಿ ಸಾಂಸ್ಕೃತಿಕವಾಗಿ ಪ್ರತಿನಿಧಿಸುವ ಪುರುಷ ಸಾಮ್ರಾಜ್ಯದ ಕಥಾವಳಿಗಳಲ್ಲಿ ಅದಕ್ಕೆ ಸಮಬಲವಾಗಿ ತನ್ನ ಪ್ರಾತಿನಿಧ್ಯವನ್ನು ಪ್ರಕಟಪಡಿಸಿದ್ದಾಳೆ.

ಕೃಷ್ಣ ನಾಣತಿಯಂತೆ ಕರ್ಣನೆಡೆಗೆ ಸಾಗಿದ ಕುಂತಾದೇವಿ ಹಿಂದೆ ನಡೆದ ವೃತ್ತಾಂತವನ್ನರುಹಿದರೂ ಈ ದೇಹ ಒಡೆಯನಿಗರ್ಪಣೆ ಎಂದು ದೃಢವಾಗಿ ನುಡಿದು ಸುಯೋಧನನೆ ತನ್ನ ಪ್ರಾಣವೆಂದು ಹೇಳಿದ ಕರ್ಣನಿಗೆ ತಾಯಿ ಕುಂತಾದೇವಿ ಕೊನೆಗೆ ನುಡಿಯುವ ನುಡಿ ಇದು.ಕುಂತಿ –'ಅಹೇ ಜೇಷ್ಠತನಯಾ ಎಷ್ಟು ಅಬ್ಬರಿಸಿದರೂ ನಿನ್ನ ಹಠ ಬಿಡಲಿಲ್ಲ, ನಿನ್ನಿಷ್ಟದಂತೆ ಆಗಲಿ, ಎನ್ನದೊಂದು ವಚಮಂಮನ್ನಿಸು, ಅದೇನೆಂದರೆ ರಣಾಗ್ರದಲ್ಲಿ ನೀನು ತಮ್ಮಂದಿರ ಮೇಲೆ ತೊಟ್ಟ ಬಾಣ ತೊಡುವುದಿಲ್ಲವೆಂದು ಎನಗೆ ಅಭಯವಂ ಕೊಡು ಮಗನೆ ಬೇಗನೆ.

**3. ಉಪಸಂಹಾರ:**

ಕುಂತಿಯ ಒಂದು ಮಾತು ಇಡೀ ಕುರುಕ್ಷೇತ್ರದ ರಣರಂಗವನ್ನು ಅಲ್ಲೋಲ ಕಲ್ಲೋಲ ಮಾಡುತ್ತದೆ. ತಾಯಿಗೆ ವಚನ ಕೊಟ್ಟ ಕರ್ಣ ಅನಿವಾರ್ಯವಾಗಿ ಸೋಲೊಪ್ಪಿ ಅಸುನೀಗುತ್ತಾನೆ, ಮಹಾಭಾರತದಲ್ಲಿ ಕುಂತಿಯ ಪ್ರಾತಿನಿಧ್ಯ ಪ್ರಧಾನವಾದಂತೆ, ಎಲ್ಲಾ ಬಯಲಾಟದಲ್ಲೂ ಮಹಿಳೆಯ ಪ್ರಾತಿನಿಧ್ಯ ಅಧಿಕವಾಗೇ ದೃಢಪಟ್ಟಿದೆ.

**ಪರಾಮರ್ಶನ ಗ್ರಂಥಗಳು:**

1 ನಲವಡಿ ಶ್ರೀಕಂಠಶಾಸ್ತ್ರಿಕೃತ – "ಇಂದ್ರಜಿತು ಕಾಳಗ"
ಮೂಡಲಪಾಯ ಬಯಲಾಟ

2 ನಲವಡಿ ಶ್ರೀಕಂಠಶಾಸ್ತ್ರಿಕೃತ – "ಭಕ್ತ ಮಾರ್ಕಂಡೇಯ"
ಮೂಡಲಪಾಯ ಬಯಲಾಟ

3 ನಲವಡಿ ಶ್ರೀಕಂಠಶಾಸ್ತ್ರಿಕೃತ – "ದೌಪದಿ ವಸ್ತ್ರಾಪರಣ"
ಮೂಡಲಪಾಯ ಬಯಲಾಟ

4–5 ನಲವಡಿ ಶ್ರೀಕಂಠಶಾಸ್ತ್ರಿಕೃತ – "ವೀರ ಅಭಿಮನ್ಯು
ಮೂಡಲಪಾಯ ಬಯಲಾಟ

6 ಮಲ್ಲಿಕಾರ್ಜುನ ಹೂಗಾರ – ಪ್ರಮೀಲಿ ಬಬ್ರುವಾಹನ ಬಯಲಾಟ

7 ಮಲ್ಲಿಕಾರ್ಜುನ ಹೂಗಾರ –ಕರ್ಣಾರ್ಜುನರ ಕಾಳಗ ಬಯಲಾಟ

Hey Kanta, you should do the right thing for the mind of Siddhalingeshwar, who is Ragrama Nilayan. If you put on a cult and foolishly touch Tarulanol Dhuravan, your head will not survive.

In this way, Chitrangade, who informs Arjuna, becomes a brave, punctual and tactful speaker who speaks with balance. Thus, in a male-dominated society, she has expressed her representation equally in the narratives of the male empire, which is culturally represented.

This is the story of Kuntadevi, who went to Karna like Krishna, who firmly said that this body is her master, and who said that Suyodhana is his life arrow Give me an abhayavam that you will not wear it, son, quickly.

**3. Conclusion**

One word of Kuati shakes the entire battlefield of Kurukshetra. Karna, who vowed to his mother, inevitably falls into despair, just as the representation of Kunti in the Mahabharata is predominant, the representation of women is strongly affirmed in all the revelations.

**Reference Books**

Reference Books:

1 Nalavadi Sri Kantha Shastrikrita - "Indrajitu Kalaga"
Mudalapaya bayalata

2 Nalavadi Sri Kanthashastikrita - "Bhakta Markandeya"
Mudalapaya bayalata

3 Nalavadi Sri Kantha Shastrikrita - "Daupadi Vastraparana"
Mudalapaya bayalata

4-5 Nalavadi Sri Kanthashastikrita - "Veera Abhimanyu
Mudalapaya bayalata

6 Mallikarjuna Hugara - Pramili Babruvahana Bayalata

7 Mallikarjuna Hugara-Karnarjuna's fight open